SRI R. GUNDU RAO (Chief Minister).--

(a) The Deputy Superintendent of Excise with his staff actually conducted raids in Adambkudru in Jappinamogaru village. This was in the normal course of their duties. There was no tresspassing and no ransacking or looting of properties or any damage done to properties. No goondas were present.

(b) It is the excise staff that became the target of attack/assault and not the villagers Inspite of this, the villagers have lodged a complaint to the Superintendent of police, Mysore under intimation to Chief Minister.

(c) Does not arise.

ANNOUNCEMENT

MR. SPEAKER.—I have received letters from Sri G. S. Shivanan-jappa and Kumari S. Pramila stating that they have joined Congress (I) Legislature Party. I have also received a letter dated 11th March 1981 from the Leader of the Karnataka Legislature Congress (I) Party stating that Sri G. S. Shivanjappa and Kumari S. Pramila have been admitted to their party.

Representation by members

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನಿನ್ನೆ ದಿವಸ ಸಂಪು ಮಾಡತಕ್ಕ ಪೈದ್ಯಕೀಯ ವಿದ್ಯಾರ್ಥಿಗಳ ಮೇಲೆ ಹುಬ್ಬಳ್ಳಿಯಲ್ಲಿ ಲಾಠಿ ಚಾರ್ಜ್ ಮಾಡಿ ಆನೇಕರಿಗೆ ಗಾಯಗಳಾಗಿವೆ. ಈ ಸಂಬಂಧದಲ್ಲಿ ಚರ್ಚೆ ಮಾಡಿದ್ದಾರೆ. ಆ ವಿಚಾರವಾಗಿ ನಾನು ಪುನಃ ಮಾತನಾಡುವುದಿಲ್ಲ. ಈ ವಿದ್ಯಾರ್ಥಿಗಳ ಸಂಪು ಕಳೆದ ಮೂರು ತಿಂಗಳಿಂದಲೂ ನಡೆಸಿಕೊಂಡು ಬಂದಿದ್ದಾರೆ. ಅವರು ತಮ್ಮ ಬೇಡಿಕೆಗಳನ್ನು ಇಟ್ಟಿದ್ದಾರೆ, ಇದುವರೆಗೂ ಶಾಂತ ರೀತಿಯಿಂದ ಮತ್ತು ಶಿಸ್ತಿನಿಂದ ಮಾಡಿಕೊಂಡು ಬಂದಿದ್ದಾರೆ. ಹುಬ್ಬಳ್ಳಿಯಲ್ಲಿ ಚಳುವಳಿ ನಡೆಸುತ್ತಿದ್ದಾಗ ನಿನ್ನೆ ದಿವಸ ಪೋಲೀಸ್ ಅಧಿಕಾರಿಗಳು ಸರಿಯಾಗಿ ವರ್ತನೆ ಮಾಡದೆ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ. ಅದರ ಜೊತೆಗೆ ಪ್ರಿನ್ಸಿಪಾಲರು ಬರುವಾಗ ಲಾಠಿ ಚಾರ್ಜ್ ಮಾಡಿ ಅವರು ಗಡಾರದಲ್ಲಿ ಬಿದಿದ್ದಾರೆ. ಶೆಲ್ ಸಿಡಿಸಿದಾಗ ಅವರಿಗೆ ಜ್ಞಾನ ತಪ್ಪಿ ಎತ್ತುಕೊಂಡು ಹೋಗುವ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು.—ಈಗ ತಾನೇ ನೋಟೀಸ್ ಕೊಟ್ಟಿದ್ದೀರಿ?.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಚರ್ಚೆ ಮಾಡುವುದಿಲ್ಲ. ಮುಖ್ಯ ಮಂತ್ರಿಗಳು ತಮ್ಮ ನಿಲುವನ್ನು ಸ್ಪಷ್ಟ ಮಾಡಿದ್ದಾರೆ. ನಾವು ಕೂಡ ನಮ್ಮ ವಿಚಾರವನ್ನು ಹೇಳಿದ್ದೇವೆ. ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು, ಸಂಪು ಮಾಡತಕ್ಕಂತಹ ವಿದ್ಯಾರ್ಥಿಗಳನ್ನು ಕರೆಸಿ ಮಾತನಾಡಿ ಎಂದು ಆರೋಗ್ಯ ಮಂತ್ರಿಗಳಿಗೆ ತಿಳಿಸಿದ್ದರು. ಅಧ್ಯಕ್ಷರೇ ನಾವು ವಿದ್ಯಾರ್ಥಿಗಳ ಮುಖಂಡರುಗಳನ್ನು ಕರೆದು ಮಾತನಾಡುವ ಸಲಹೆ ಮಾಡಿದಾಗ, ಸಂಪು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳು ಆರೋಗ್ಯ ಮಂತ್ರಿಗಳಿಗೆ ತಿಳಿಸಿದರು. ಮಾನ್ಯ ಆರೋಗ್ಯ ಮಂತ್ರಿಗಳು ವಿರೋಧ ಪಕ್ಷದ ಶಾಸಕರನ್ನು ಕರೆದು ಚರ್ಚೆ ಮಾಡಿ ಇತ್ಯರ್ಥ ಮಾಡತಕ್ಕ ಸಲಹೆ ಈ ಮನೆಯಲ್ಲಿ ಬಂದಮೇಲೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ?

ಅಧ್ಯಕ್ಷರು.—ಈಗ ತಾನೆ ನೋಟೀಸ್ ಬಂದಿದೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನಾವು ಒಂದು ಸಲಹೆ ಕೊಟ್ಟಮೇಲೆ ಇವುವರೆಗೆ ಏನು ಮಾಡಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅಲ್ಲಿ ಅಮರಣ ಉಪವಾಸ ಆಗುತ್ತಿದೆ.

MR. SPEAKER.—Yes, the House made an appeal day before yesterday. Unfortunately, this has happened. I do not want to enter into arguments. I have received Sri Bommai's notice and I will pass on the same to Government.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನೋಟೀಸ್ ಪ್ರಶ್ನೆ ಮುಖ್ಯವಲ್ಲ. ಆಮರಣ ಉಪವಾಸ ಇದ್ದಾಗ ಕೂಡಲೇ ಕರೆಸಬೇಕಾಗುತ್ತದೆ ಏನಾದರೂ ಆನಾಹುತ ಆದರೆ ಅದರ ಪರಿಣಾಮ ಭೀಕರವಾಗುತ್ತದೆ.

ಅಧ್ಯಕ್ಷರು.—ಮೊನ್ನೆ ಸಂಜೆ ಆಗಿದೆ.....

SRI C.M. ARUMUGHAM.–Sir, the point is not that this is an adjournment motion or notice that Mr. Bommai has given. Why Mr. Bommai has raised this issue is the other day the subject matter came up before the Assembly and we appealed to the Government, to the Chief Minister to call these striking doctors, and arrange early negotiations for a settlement. We also suggested that in such meetings some of the Opposition Leaders should also be invited. The Chief Minister has agreed. He also said that Mr. Samad, Minister for Health and Family Welfare to send for these students. That is the point which Mr. Bommai has raised. We are now appealing to the Chief Minister and the Government to send for the students for talks for a settlement.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಮೂರು ದಿವಸದಿಂದ ಉಪವಾಸ ಮಾಡುತ್ತಿದ್ದವರು ಮತ್ತೆ ಮುಂದುವರಿಸಿದ್ದಾರೆ. ಆದುದರಿಂದ ಆದಷ್ಟು ಬೇಗ ಅವರನ್ನು ಕರೆಸಿ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—This is a good suggestion.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಹೇಳಿದರೆ ಒಳ್ಳೆಯದಾಗುತ್ತದೆ. ನಾಳೆ ಸಂಜೆ ಇದೆ, ಅದರಿಂದ ಪರಿಣಾಮ ಬಹಳ ಆಗುತ್ತದೆ.

SRI A.K. ABDUL SAMAD (Minister for Health and Family Welfare)-Mr. Speaker Sir, on the same day the Chief Minister suggested to me that I should meet the students and the hon. Opposition Leaders. Sri Mallur Ananda Rao and Dr. Jeevaraj Alva went to the students and they said within another 24 hours they will send words to meet' Thereafter they did not send words. Sri Mallur Ananda Rao was still with them. I enquired Sri Mallur Ananda Rao and he told me. I am still with them. They said they will have a meeting and send words to me when we should call the Leaders of Opposition and the students. On the same day at about 4 O'clock he wen . At 6 O' clock Sri Mallur Ananda Rao telephoned to me that for another two

days the students are not willing to meet and thereafter they will meet. Regarding Hubli affair.....

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮಾನ್ಯ ಮಳ್ಳೂರು ಆನಂದರಾವ್ ಅವರ ವಿಷಯ ತಪ್ಪಾಗಿ ಗೊತ್ತಿದೆ. ಅವರು ಹೋದರೆ ವಿದ್ಯಾರ್ಥಿಗಳು ಬರುತ್ತಾರೆಯೇ? ಅವರು ಕಳುಹಿಸಿರತಕ್ಕ ರಾಯ ಭಾರಿ ಸರಿಯಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಬೆಂಗಳೂರಿನಲ್ಲಿರತಕ್ಕ ಪ್ರತಿನಿಧಿಗಳ ಜೊತೆಗೆ ಬೆಳಗಾಂ ಮತ್ತು ಹುಬ್ಬಳ್ಳಿ ಪ್ರತಿನಿಧಿಗಳನ್ನು ಕರೆಸಿ ಮಾತನಾಡಬೇಕು ಎಂದು ಹೇಳುತ್ತೇನೆ.

CALLING ATTENTION TO MATTERS OF URGENT PUBLIC IMPORTANCE

re : Attack of Shivsena Volunteers on the South Indian hotels etc at Bombay.

SRI A. LAKSHMI SAGAR.—Sir I call the attention of the Chief Minister to the attack of Shivsena Volunteers on the South Indian hotels, shops and other establishments at Bombay.

SRI R. GUNDU RAO (Chief Minister) -Sir, I wish to make the following Statement.

ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದವನ್ನು ಶೀಘ್ರವಾಗಿ ಇತ್ಯರ್ಥಗೊಳಿಸಬೇಕೆಂದು ಶಿವಸೇನೆ ಹಾಗೂ ಬೆಳಗಾವಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮತ್ತು ಕೊಲ್ಲಾಪುರದ ಶಾಹುಸೇನೆಯವರೂ ಕೂಡಿ ದಿನಾಂಕ ೯.೩.೧೯೮೧ ರಂದು ಮುಂಬಯಿಯಲ್ಲಿ ಪ್ರದರ್ಶನ ನಡೆಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಪ್ರದರ್ಶನಕಾರರು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಬಹಳವಾಗಿ ನಾಶಮಾಡಿದ್ದಾರೆಂದು ದಿನಾಂಕ ೧೦.೩.೧೯೮೧ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದೆ. ಅಲ್ಲದೆ, ಮಹಾರಾಷ್ಟ್ರ ಮುಖ್ಯ ಮಂತ್ರಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಮರಾಠಿ ಮಾತನಾಡುವ ಪ್ರದೇಶಗಳಾದ ಬೆಳಗಾವಿ, ಕಾರವಾರ, ಬೀದರ, ನಿಪ್ಪಾಣಿ, ಭಾಲ್ಕಿ ಮುಂತಾದ ಪ್ರದೇಶಗಳನ್ನು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ವರ್ಗಾಯಿಸುವುದರ ಮೂಲಕ ಕಳೆದ ೨೫ ವರ್ಷಗಳಿಂದ ಮುಂದುವರಿಯುತ್ತಿರುವ ಗಡಿ ವಿವಾದವನ್ನು ಬಗೆಹರಿಸಬೇಕೆಂಬ ಶಿವಸೇನಾ ಪ್ರಮುಖರ ಆಶಯಕ್ಕೆ ತಮ್ಮ ಸಮಿತಿಯಿದೆಯೆಂದು ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಮೊದಲು ಮಹಾರಾಷ್ಟ್ರ ಮುಖ್ಯ ಮಂತ್ರಿಯವರು ಶಾಸನ ಸಭೆಯಲ್ಲಿ ಮಾತನಾಡುತ್ತಾ ಗಡಿ ವಿವಾದದಲ್ಲಿ ನಿರ್ಣಯ ತೆಗೆದುಕೊಳ್ಳುವ ಮೊದಲು ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಇದಾದ ನಂತರ ವಿಧಾನ ಪರಿಷತ್ತಿನ ಲ್ಲಿಹೇಳಿಕೆ ಕೊಡುತ್ತಾ ಪ್ರಸಕ್ತ ಶಾಸನ ಸಭೆಯ ಅಧಿವೇಶನ ಮುಗಿದ ನಂತರ ಬೆಂಗಳೂರಿನಲ್ಲಿ ಕರ್ನಾಟಕ ದಮುಖಿ ಮಂತ್ರಿಗಳೊಡನೆ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. ಮತ್ತು ಪ್ರಧಾನ ಮಂತ್ರಿಗಳು ಈ ರೀತಿಯಾಗಿ ಸಲಹೆ ಮಾಡಿದ್ದಾರೆಂದು ಕೂಡ ತಿಳಿಸಿದ್ದಾರೆ. ಆಲ್ಲದೆ ಈ ವಿಷಯವನ್ನು ದಿನಾಂಕ ೮.೩.೧೯೮೧ ರಂದು ಮುಂಬಯಿಯಲ್ಲಿ ಕರ್ನಾಟಕದ ಮುಖ್ಯ ಮಂತ್ರಿಯವರೊಡನೆ ಚರ್ಚಿಸಿರುವುದಾಗಿ ತಿಳಿಸಿದ್ದಾರೆಂದು ವರದಿಯಾಗಿದೆ. ಇಬ್ಬರೂ ಮುಖ್ಯ ಮಂತ್ರಿಗಳೂ ಸಹ ಈ ವಿವಾದಕ್ಕೆ ಪರಿಹಾರವನ್ನು ಕಂಡು ಹಿಡಿಯುವ ಭರವಸೆಯುಳ್ಳವರಾಗಿರುವುದಾಗಿ ತಿಳಿಸಿದ್ದಾರೆ.

ದಿನಾಂಕ ೧೨.೩.೧೯೮೧ರ ಪ್ರಜಾವಾಣಿ ಪತ್ರಿಕೆಯಲ್ಲಿ ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ವಿಶಾಲ ಗೋಮಾಂತಕ ರಾಜ್ಯವನ್ನು ರಚಿಸಿ, ಅದಕ್ಕೆ ಮರಾಠಿ ಮಾತನಾಡುವ ಅಂದರೆ ಕರ್ನಾಟಕ ರಾಜ್ಯಕ್ಕೆ ಸೇರಿದ ಕಾರವಾರ ಮುಂತಾದ ಪ್ರದೇಶಗಳನ್ನು ವಿಲೀನಗೊಳಿಸಿ ಈ ಗಡಿ ವಿವಾದವನ್ನು ಬಗೆಹರಿಸುವ ಸಲಹೆಯೊಂದನ್ನು ಸಹ ಮಾಡಿದ್ದಾರೆಂದು ವರದಿಯಾಗಿದೆ.